# 'ಕಲಿಕಾ ಸಹಭಾಗಿತ್ವ': ವಿಶಿಷ್ಟ ಕಾರ್ಯಕ್ರಮ

**ರೋಹಿಣಿ ಮುಂಡಾಜೆ**

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ರಾಜ್ಯದ ಪ್ರಾಥಮಿಕ ಶಾಲಾ ಮಕ್ಕಳಲ್ಲಿ ಅಕ್ಷರ ಗುರುತಿಸುವ ಮತ್ತು ಸರಾಗವಾಗಿ ಓದುವ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ ಶಿಕ್ಷಣ ಇಲಾಖೆ ನಗರದ 'ಅಕ್ಷರ ಪ್ರತಿಷ್ಠಾನ'ದ ಮೂಲಕ 'ಕರ್ನಾಟಕ ರಾಜ್ಯ ಕಲಿಕಾ ಸಹಭಾಗಿತ್ವ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಜುಲೈ ತಿಂಗಳಲ್ಲಿ ರಾಜ್ಯದಲ್ಲಿ ಜಾರಿಗೆ ತರಲಿದೆ.

ಶಿಕ್ಷಣ ಇಲಾಖೆ ಇತ್ತೀಚೆಗೆ ಕೈಗೊಂಡ 'ಮೌಲ್ಯಾಂಕನ ಕಾರ್ಯಕ್ರಮ'ದಲ್ಲಿ ವಿದ್ಯಾರ್ಥಿಗಳ ನಿರ್ವಹಣೆ ತೃಪ್ತಿಕರವಾಗಿರಲಿಲ್ಲ. ರಾಜ್ಯದಲ್ಲಿ ಶೇಕಡಾ 40ರಷ್ಟು ಪ್ರಾಥಮಿಕ ಶಾಲಾ ಮಕ್ಕಳು ಸಮರ್ಪಕವಾಗಿ ಓದಲು ಮತ್ತು ಬರೆಯಲು ವಿಫಲರಾಗಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ನಡೆಸಲಾದ ವಿಶಿಷ್ಟವಾದ 'ವಾರ್ಷಿಕ ಶೈಕ್ಷಣಿಕ ಸ್ಥಿತಿಗತಿ ವರದಿ' (ಅಸರ್)ನಲ್ಲಿಯೂ ಮಕ್ಕಳ ಕಲಿಕಾ ಮಟ್ಟದಲ್ಲಿನ ಕೊರತೆ ಸ್ಪಷ್ಟವಾಗಿದೆ.

ಆದ್ದರಿಂದ ಮಕ್ಕಳು ಅಕ್ಷರವನ್ನು ಗುರುತಿಸಿ ಸರಾಗವಾಗಿ ಓದಲು 'ಸರ್ಕಾರಿ' ಕ್ರಮಕ್ಕಿಂತ ಭಿನ್ನ ಮಾದರಿಯನ್ನು ಪ್ರತಿಷ್ಠಾನ ತನ್ನ ಯೋಜನೆಯಲ್ಲಿ ಅಳವಡಿಸಲಿದೆ.

'ತರಗತಿಯಲ್ಲಿ ಕಲಿಸುವ ಸಾಂಪ್ರದಾಯಿಕ ಶೈಲಿಯ ಅಕ್ಷರಾಭ್ಯಾಸ ಮಕ್ಕಳನ್ನು ಓದಿನತ್ತ ಆಕರ್ಷಿಸುವಲ್ಲಿ ವಿಫಲವಾಗಿದೆ. ಹೇಳಬೇಕಾದ ಪಾಠವನ್ನು ಭಿನ್ನರೂಪದಲ್ಲಿ ಮಕ್ಕಳಿಗೆ ಹೇಳಿಕೊಡುವುದರಿಂದ ಮಕ್ಕಳು ತಮ್ಮನ್ನು ತೊಡಗಿಸಿಕೊಲು ಸಾಧ್ಯವಾಗುತ್ತದೆ. ಇದರಿಂದಾಗಿ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚುತ್ತದೆ' ಎಂಬುದು ಪ್ರತಿಷ್ಠಾನದ ಅಧ್ಯಕ್ಷೆ ರೋಹಿಣಿ ನೀಲೇಕಣಿ ಅವರ ಮಾತು.

**ಯಶಸ್ವಿ ಪ್ರಯೋಗ:** ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಎರಡು ಶಾಲೆಗಳಲ್ಲಿ ಕಳೆದ ವರ್ಷ 'ಕಲಿಕಾ ಸಹಭಾಗಿತ್ವ' ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಅಳವಡಿಸಿದ ಪ್ರತಿಷ್ಠಾನ ತನ್ನ ಪ್ರಯೋಗದಲ್ಲಿ ಸಫಲವಾಗಿದೆ. ನಂತರ 100 ಶಾಲೆಗಳಲ್ಲಿ ಈ ಪ್ರಯೋಗವನ್ನು ಕೈಗೊಳ್ಳಲಾಯಿತು. ಎರಡೂ ಪ್ರಯತ್ನಗಳಲ್ಲಿ ನಿರೀಕ್ಷಿತ ಫಲಿತಾಂಶ ಬಂದ ಹಿನ್ನೆಲೆಯಲ್ಲಿ ನಗರ ಜಿಲ್ಲೆಯ ಎಲ್ಲಾ 1,400 ಸರ್ಕಾರಿ ಶಾಲೆಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸಲು ಪ್ರತಿಷ್ಠಾನ ಮುಂದಾಗಿದೆ.

'ಒಟ್ಟು 45 ದಿನಗಳ ಕಾರ್ಯಕ್ರಮ ಆರಂಭಿಕ ಹಂತದಲ್ಲಿ ಎರಡು ಶಾಲೆಗಳಲ್ಲಿ ನಡೆಸಿದ ಪ್ರಾಯೋಗಿಕ ಕಾರ್ಯಕ್ರಮದಲ್ಲಿ ಅಭೂತಪೂರ್ವ ಯಶಸ್ಸು ದೊರೆತಿತ್ತು. ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮೊದಲು ತರಬೇತು ಮಾಡುವ ಮೂಲಕ ಶಾಲೆಯಲ್ಲಿ ಗುಣಮಟ್ಟದ ಕಲಿಕಾ ವಾತಾವರಣ ನಿರ್ಮಾಣ ಮಾಡಲಾಗುವುದು. ಸುಮಾರು 4,000 ಮಂದಿ ಶಿಕ್ಷಕರ ತರಬೇತಿ ಈಗಾಗಲೇ ಪೂರ್ಣಗೊಂಡಿದೆ. ಬೆಂಗಳೂರು ನಗರ ಜಿಲ್ಲೆಯ ಒಟ್ಟು ಎರಡು ಲಕ್ಷ ವಿದ್ಯಾರ್ಥಿಗಳು ಕಾರ್ಯಕ್ರಮದ ಫಲಾನುಭವಿಗಳಾಗುತ್ತಾರೆ' ಎಂದು ರೋಹಿಣಿ ನೀಲೇಕಣಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮಕ್ಕಳ ಕಲಿಕಾ ಗುಣಮಟ್ಟ ಕ್ಷೀಣಿಸಲು ಮೊದಲ ಹೊಣೆ ಪೋಷಕರು. ಮನೆಯಲ್ಲಿ 'ಓದುವ ವಾತಾವರಣ' ಇಲ್ಲದಿರುವ ಕಾರಣ ಮಕ್ಕಳು ಓದುವತ್ತ ಗಮನ ಕೊಡುವುದಿಲ್ಲ. ಕಲಿಕಾ ಗುಣಮಟ್ಟ ಉತ್ತಮವಾಗಿರುವ ವಿದ್ಯಾರ್ಥಿ ನಿಮಿಷಕ್ಕೆ 60 ಪದಗಳನ್ನು ಸರಾಗವಾಗಿ ಓದಬಲ್ಲ. ಆದರೆ, ಸಮೀಕ್ಷೆಯ ವರದಿಯಂತೆ, ಶೇಕಡಾ 40ರಷ್ಟು ಮಕ್ಕಳು ಅಕ್ಷರ ಗುರುತಿಸಲು ಮತ್ತು ಪದ ಜೋಡಿಸಿ ಓದಲು ವಿಫಲರಾಗುತ್ತಾರೆ. ಮಕ್ಕಳ ಕಲಿಕಾ ಗುಣಮಟ್ಟವನ್ನು ಹೆಚ್ಚಿಸುವುದೇ ಕಾರ್ಯಕ್ರಮದ ಉದ್ದೇಶ' ಎಂದು ಅವರು ವಿವರಿಸಿದರು.

**ಕಾರ್ಯಕ್ರಮದ ಸ್ವರೂಪ:** ಸಾಮಾನ್ಯವಾಗಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ 'ಅ–ಅಗಸ', 'ಆ–ಆಟ', 'ಇ–ಇಲಿ' ಹೀಗೆ ಸಾಂಪ್ರದಾಯಿಕ ಶೈಲಿಯಲ್ಲಿ ಅಕ್ಷರಾಭ್ಯಾಸ ಆರಂಭವಾಗುತ್ತದೆ. 'ಕಲಿಕಾ ಸಹಭಾಗಿತ್ವ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮಕ್ಕಳಿಗೆ ಅಗಸ, ಇಲಿ, ಆಟ, ಊಟ ಹೀಗೆ ಸಂಬಂಧಿಸಿದ ಶಬ್ದಗಳಿಗೆ ಹೊಂದುವ ಚಿತ್ರಗಳನ್ನು, ಕಥೆಗಳನ್ನು ಶಿಕ್ಷಕರು ಹೇಳಿಕೊಡುತ್ತಾರೆ. ಮಾನಸಿಕ ಮತ್ತು ದೈಹಿಕ ಸಹಭಾಗಿತ್ವದಲ್ಲಿ ಕಲಿಕೆ ಪ್ರಕ್ರಿಯೆ ಸಾಗುತ್ತದೆ.

ಬೆಂಗಳೂರು ನಗರ ಜಿಲ್ಲೆಯ ಬಳಿಕ ಇಡೀ ರಾಜ್ಯದಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ 'ಕಲಿಕಾ ಸಹಭಾಗಿತ್ವ' ಕಾರ್ಯಕ್ರಮ ಜಾರಿಗೆ ಬರಲಿದೆ. ಖಾಸಗಿ ಸಂಘ ಸಂಸ್ಥೆಗಳ ಆರ್ಥಿಕ ಸಹಕಾರದಲ್ಲಿ ಯೋಜನೆ ಜಾರಿಗೆ ಬರುತ್ತದೆ ಎಂದು ರೋಹಿಣಿ ತಿಳಿಸಿದರು.

www.rohininilekani.org